## ಕವಿತೆ




**ಟಿ. ಯಲ್ಲಪ್ಪ**

ಕಲೆ: ವೆಂಕಟ್ರಮಣ ಭಟ್


# ದಾಸವಾಳ

ಮುಂಜಾನೆಯ ಇಬ್ಬನಿಯ ಮಬ್ಬಿನಲಿ
ತೂಕಡಿಸುವ ನಿದ್ದೆ ಮಂಪರಿನಲ್ಲಿ
ಕೆಂಪಗೆ ನಳನಳಿಸುವ ದಾಸವಾಳದ ಹೂವು
ತಾಯಗರ್ಭದಿಂದ ಈಗಷ್ಟೇ ಹೊರಬಂದ
ರಕ್ತ ಸಿಕ್ತ ಹಸುಳೆಯಂತೆ ಕಾಣುತ್ತಿದೆ
ಕಾಣ್ಕೆ ಬಲ್ಲ ಕವಿ ಅಕ್ಷರಗಳ ದಿಗ್ಬಂಧನದಲ್ಲಿ
ಕಣ್ಕಟ್ಟಿನ ಜಾದು ನಡೆಸಿದಂತೆ!



2
ದಳ ದಳ ತೆರೆದು ನಾಲ್ಕು – ಎಂಟು – ಹದಿನಾರರ
ಗುಣಿತದಲಿ ಅರಳುತ್ತಿದೆ ಹೂವು,
ಅದರ ಬೇರು ಹರಡುತ್ತಿದೆ
ಬ್ರಹ್ಮಾಂಡದ ಕರುಳ ಬಗೆಯುವಂತೆ
ಒಳಗದರ ಬೇರು ಕುಡಿಯುವ ನೀರು
ಹರಿಯುತ್ತಿದೆ
ಅತಳ ವಿತಳ ಸುತಳ ಪಾತಾಳ ತಳಾತಳ
ರಸಾತಳಗಳ ಜಲದ ಜಲಕಣ್ಣ ದಾರಿಗಳ
ಹುಡುಕಿ ದಿಕ್ಕುಕಾಣದೆ ದಿಕ್ಕು ತಪ್ಪಿದ್ದಾಳೆ ಆಕಾಶಗಂಗೆ
ಜಲಪ್ರಳಯಕ್ಕೇ ಮುಹೂರ್ತವಿಟ್ಟಂತೆ
ಅವಳೊಡನೆ ಕೈ ಜೋಡಿಸಿದಂತಿದೆ ಖದೀಮರ
ಅಂತರ್ದಂಗೆ
ಹೊರಗಿಲ್ಲಿ ನಡೆದೇ ಇದೆ, ಭೂತಾಯ ಭೋಗಿಪ
ತಾಯಿಗಂಡರ ಬಹಿರ್ದಂಗೆ!
ದಾಸವಾಳವು ಈಗ ಸಹಸ್ರದಳ ತೆರೆದು
ಬ್ರಹ್ಮಾಂಡ ಭಾಷ್ಯವ ಬರೆಯುತ್ತಿದೆ
ನೆತ್ತರ ಕತ್ತಿಯಂತಿರುವ ಅದರ ಪರಾಗದಂಟಿಗೆ
ಅಂಟಿರುವ ಉನ್ಮತ್ತ ದುಂಬಿ ದಂಡು
ಮಧುಬಟ್ಟಲ ಮುಗುಚಿ ಮಧುಪಾನ ಮಾಡುತ್ತಿವೆ
ಹೊಕ್ಕುಳಬಳ್ಳಿ ಕತ್ತರಿಸಿಕೊಂಡ ನೋವಲ್ಲೂ
ಮೈಮರೆತ ಕೂಸು ತಾಯ ಎದೆಗೆ ತುಟಿಯಿಟ್ಟು
ಹಸಿವ ನೀಗಿಕೊಳ್ಳುವಂತೆ...

3
ದೇಶ–ಕೋಶ–ಭಾಷೆ–ಬ್ರಹ್ಮಾಂಡವೆಲ್ಲಾ ಅಳಿದು
ಕರಗಿ ನೀರಾಗಿ ಹರಿದು; ಆಡು, ಹಸು, ಕುರಿ,
ಕೋಳಿ
ನರ, ನೆತ್ತರು, ಕಂಬನಿಗಳೊಂದಾಗಿ ಬೆರೆತು
ಸಾವಿನಲ್ಲೂ ಸಮತೆಯ ಸಂಕರಗೀತೆ ಮೊಳಗುತ್ತಿವೆ!